R No KRNN 12

23 - 2 - 1975

in ★ ★ ★ ★ ★

58 th Year ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily

Mysore 4

- For Influential Publicity -

ಪ್ರಕಾಶಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ (3 ಸಂ.

ಷೇಕರಿಂದ ಜಯಪ್ರಕಾಶರನ್ನು ಲಘುವಾಗಿ ಪ್ರಯೋಗ

ಪೋಲೀಸು ಕಲ್ಯಾಣ ಕೇಂದ್ರ

ಮೈಸೂರು ನಗರದಲ್ಲಿ ಪೋಲೀಸು ಕಲ್ಯಾಣ ಕೇಂದ್ರ ಉದ್ಘಾಟಿಸುತ್ತಾ, ಪೋಲೀಸು ಡಿ ಐ ಜಿ ಯವರು ಮೈಸೂರು ನಗರಕ್ಕೆ ಅಡಿಷನಲ್ ಪೋಲೀಸು ಸೇವೆಯನ್ನು ನೇಮಿಸಲು ಯೋಜನೆ ಇದೆ ಎಂದು ಹೇಳಿದರು. ಪೋಲೀಸು ಕಲ್ಯಾಣ ನಿಧಿಗೆ 4 ವರೆ ಲಕ್ಷ ಶೇಖರ ಆಗಿರುವದೆಂದು ಪೋಲೀಸು ಕೂರರಿನ್ ಟೆಂಡೆಂಟ್ ಶ್ರೀ ದಿನಕರ್‌ರವರು ತಿಳಿಸಿದರು.

ವುಡ್‌ಲಾಂಡ್ಸ್ 21 2 75 ರಿಂದ

ಅವೋಫು ಆರಂಭ

ಕನ್ನಾ ಕು ಮಾರಿ

ಅಪೂರ್ವ ಕಲರ್ ಮಲಯಾಳಂ ಕಲಾಕೃತಿ

ಪಾತ್ರ– ಕಮಲಾ ಹರ್ಷ ರೀಟಾ ಬಹದ್ದಾರಿ ದಿನಕ್ಕೆ ಪ್ರದರ್ಶನಗಳು

ಅಪೆರಾ 21 2 75 ರಿಂದ

ಬಾಳು ಬೆಳಗಿತು

ಅಮೋಘ ಕನ್ನಡ ಚಿತ್ರ

ಪಾತ್ರ – ರಾಜಕುಮಾರ್ ಜಯಂತಿ ದ್ವಾರಕೀಶ್ ದಿನ 3 ಪ್ರದರ್ಶನಗಳು

For Holdalls, Kit Bags, & Suit Cases

ಹೋಲ್ಡ್ ಆಲ್, ಕಿಟ್ ಬ್ಯಾಗ್, ಸೂಟ್‌ಕೇಸುಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್

Fair Price Shop in Actual Practice

ಸ್ನೇಹ ಸಂಬಂಧ

ಚೀನಾ-ಭಾರತಕ್ಕೂ ಸ್ನೇಹ ಸಂಬಂಧವು ಕ್ಷೀಣಪ್ರದಲ್ಲೇ ಉಂಟಾಗುವುದೆಂದು ಚೀನಾ ಉರ ಪ್ರಧಾನಿ ಚೌನ್ ಹ್ಸಿಲಿನ್ ಪತ್ರಿಕೆಯವರೊಂದಿಗೆ ಕಲ್ಕತ್ತಾದಲ್ಲಿ ಮಾತನಾಡುತ್ತಾ ತಿಳಿಸಿದರು

●

ಮಾತಿನ ಅವಶ್ಯಕತೆ ಇಲ್ಲ

ಬಾಲಾಂಡಷೆಹದಲ್ಲಿ ಭಾರಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ, ಸರ್ವೋದಯ ನಾಯಕ ಶ್ರೀ ಜಯಪ್ರಕಾಶ ನಾರಾಯಣರು, ತಾವು ಬೀಹಾರು ಸಮಸ್ಯೆ ವಿಚಾರದಲ್ಲಿ ಪ್ರಧಾನಿಯವರೊಡನೆ ಮಾತನಾಡುವ ವಿಷಯವಿಲ್ಲವೆಂದು, ಜನತೆ ಪ, ಪ್ತುತ ಭ್ರಷ್ಟಾಚಾರ ಪದ್ಧತಿ ಸರ್ಕಾರದ ವಿರುದ್ಧ ಶಕ್ತಿ ಹೋರಾಟ ನಡೆಸಬೇಕೆಂದು ಮನವಿ ಮಾಡಿದರು.

ಪ್ರಧಾನರ ನುಡಿ

ರಿಜರ್ವ್ ಬ್ಯಾಂಕಿನ ಈಗಿನ ಮುಖ್ಯರ ಅಲ್ಲಿಯ ಅಧಿಕಾರಿಗಳು ತಮ್ಮ ಟೇಬಲ್ಲನ್ನು ಒರಿಸಿಕೊಳ್ಳಲು ತಿರಸ್ಕರಿಸಿದ್ದು, ಸೇವಕರ ಕೆಲಸ ಅದಲ್ಲವೆಂದು ಆಗಿದೆಯಷ್ಟೆ. ಇದನ್ನು ಗಮನಿಸಿದ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಮದ್ರಾಸಿನಲ್ಲಿ ಭಾಷಣ ಮಾಡುತ್ತಾ, ನನ್ನ ಆಫೀಸಿನಲ್ಲಿ ಸೇವಕರಿದ್ದಾರೆ, ಅವರು ಟೇಬಲ್ ಜೆನ್ನಾಗಿ ಒರೆಸದಿದ್ದಾಗ ನಾನೇ ಜೆನ್ನಾಗಿ ಒರೆಸುತ್ತೇನೆ ಎಂದರು.

★

ನಕ್ಸಲಿ ಚಿತ್ರಪಠಗಳ ಮೆರವಣಿಗೆ

ಹೈದರಾಬಾದಿನಲ್ಲಿ ಪ್ರಪ್ರಥವಾಗಿ ಮಾವೋ ತ್ಸೆ ತುಂಗ್, ಮಾರ್ಕ್ಸ್, ಲೆನಿನ್ ಮತ್ತು ಚಾರುಮಜುಂದಾರ್ ಹಾಗೂ ಇತರ ವ್ಯಕ್ತರಾದ ನಕ್ಸಲೈಟು ನಾಯಕರ ವರ್ಣರಂಜಿತ ಪಠಗಳ ಮೆರವಣಿಗೆ ನಡೆಸಿದರು

ಸಭಾ ಪರಿತ್ಯಾಗ

ಕರ್ನಾಟಕ ಖಾಸಗಿ ವಿದ್ಯಾಸಂಸ್ಥೆಗಳು (ಶಿಸ್ತು ಮತ್ತು ಹತೋಟಿ) ಮಸೂದೆ ಕುರಿತು ವಿರೋಧಿಗಳ ಹೋರಾಟ ವಿಫಲಗೊಂಡಾಗ ವಿರೋಧ ಪಕ್ಷದವರು ಘೋಷಣೆಗಳನ್ನು ಕೂಗುತ್ತಾ ಸಭಾಪರಿತ್ಯಾಗ ನಡೆಸಿದರು

★

ಷೇಕ್ ಅಬ್ದುಲ್ಲರಿಗೆ ಅಡಳಿತ.

ತಮ್ಮ ಸಹೋದ್ಯೋಗಿಗಳೊಡನೆ ಷೇಕ್ ಅಬ್ದುಲ್ಲರವರು ಈ ತಿಂಗಳು 25 ರಂದು ಅಧಿಕಾರ ಸ್ವೀಕರಿಸುವರೆಂದು ಜಮ್ಮು ವರದಿಯೊಂದು ತಿಳಿಸುತ್ತದೆ ಕಡೆಗೆ ಕಾಶ್ಮೀರದ ವಿಶೇಷ ಸ್ಥಾನಮಾನಗಳನ್ನು ಒಪ್ಪಿಕೊಂಡುದಕ್ಕೆ ತಮಗೆ ತುಂಬಾ ಹರ್ಷವಾಗಿದೆ ಎಂದರು ಷೇಕ್ ಅಬ್ದುಲ್ಲ.

●

ಷೇಕ್ ಅಬ್ದುಲ್ಲರ ಹೇಳಿಕೆ

ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಷೇಕ್ ಅಬ್ದುಲ್ಲರವರು ಮಾತನಾಡುತ್ತಾ, ತಾವು ಜಯಪ್ರಕಾಶರ ಚುನಾವಣೆ ಸುಧಾರಣೆಯನ್ನು ಸಂಪೂರ್ಣ ಬೆಂಬಲಿಸುವದಾಗಿ ಹೇಳಿ. ಕಾಶ್ಮೀರದಲ್ಲಿ ತಾವು ಆಡಳಿತ ವಹಿಸಿಕೊಂಡ ನಂತರ ಈ ವಿಚಾರಕ್ಕೆ ಚಾಲನೆ ಕೊಡುವುದಾಗಿಯೂ, ಈ ಪ್ರಯೋಗ ವಿಜಯಗೊಂಡರೆ, ಭಾರತದ ಮಿಕ್ಕ ಕಡೆ ಪ್ರಯೋಜನವನ್ನು ಅನುಸರಿಸಬಹುದೆಂದು ತಿಳಿಸಿದರು.

★

ಕಮ್ಯೂನಿಸ್ಟ್ ಅಲ್ಲ

ತಮ್ಮ ಸರ್ಕಾರ ಹಾಗೂ ತಮ್ಮ ಪಕ್ಷ ಕಮ್ಯೂನಿಸ್ಟ್ ಆಗುತ್ತಿದೆ ಎಂಬ ಸಲಹೆಗಳನ್ನು ಪ್ರಧಾನಿ ಇಂದಿರಾರವರು ಮದರಾಸಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಭಾಷಣ ಮಾಡುತ್ತಾ ಅಲ್ಲಗಳೆದರು.

ಗಂಗಾ–ಕಾವೇರಿ

ಪ್ರಧಾನಿಯವರು— ಗಂಗಾ–ಕಾವೇರಿ ಸೇರಿಸುವ ವಿಷಯ ಸದ್ಯದಲ್ಲಿ ಇಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

○

ಸ್ವಶಕ್ತಿಲಿತ ತೊಟ್ಟಿಲು

ನ್ಯೂಯಾರ್ಕಿನ ಇಂಜಿನಿಯರ್ ಒಬ್ಬರು ಸ್ವಶಕ್ತಿಲಿತ ತೊಟ್ಟಿಲೊಂದನ್ನು ನಿರ್ಮಿಸಿದ್ದಾರೆ. ತೊಟ್ಟಿಲಲ್ಲಿರುವ ಮಗು ಅಳುವುದಕ್ಕೆ ಪ್ರಾರಂಭಿಸಿದರೆ ಅದು ತಾನಾಗಿಯೇ ತೂಗಿಕೊಳ್ಳುತ್ತದೆ ; ಅಳು ನಿಲ್ಲದೇ ಹೋದರೆ ಅದಕ್ಕೆ ಲಗತ್ತಿಸಿರುವ ಟೇಪ್ ರೆಕಾರ್ಡಿನಿಂದ ಹೋಗುಳ ಹಾಡು ಬರುತ್ತದೆ ; ಅದಕ್ಕೂ ಅಳು ನಿಲ್ಲದೇ ಹೋದರೆ ತಂದೆತಾಯಿಯರನ್ನು ಎಚ್ಚರಿಸಲು ಗಂಟೆ ಹೊಡೆದುಕೊಳ್ಳುತ್ತದೆ ; ಮಗು ಅಳು ನಿಲ್ಲಿಸಿದರೆ, ತೊಟ್ಟಿಲಿನ ವ್ಯವಸ್ಥೆಯೆಲ್ಲ ತಾನಾಗಿಯೇ ನಿಲ್ಲುತ್ತದೆ.

★

ಬೇಕಾದಾಗ .... ಮಳೆ

ಫ್ರಾಂಕ್‌ಫರ್ಟ್–ಮೇನ್ (ಡಾಡ್)— ಫ್ರಾಂಕ್‌ಫರ್ಟ್‌ನ ಅಂತರಾಷ್ಟ್ರೀಯ ಕೃಷಿ ಪ್ರದರ್ಶನದಲ್ಲಿ ತೋರಿಸಲ್ಪಟ್ಟ ಅತ್ಯಂತ ನವೀನ ಯಂತ್ರಗಳಲ್ಲಿ ಬ್ರಹ್ಮಾಂಡ ಮಳೆಯ ಯಂತ್ರವೂ ಒಂದಿತ್ತು ; ಅದನ್ನು ಸ್ಥಳಾಂತರಿಸದೆ ಅದರಿಂದ ಎಲ್ಲು ಎಕ್ಕರೆ ಗಳಷ್ಟು ಪ್ರದೇಶಕ್ಕೆ ಒಂದೇ ರೀತಿಯಲ್ಲಿ ಬೀಳಬಹುದಾದ ಮಳೆನೀರನ್ನು ಬರಿಸಬಹುದು ; ಇದರ ಯಂತ್ರವನ್ನು ಹೈಡ್ರಾಲಿಕ್ ಶಕ್ತಿಯಿಂದ ನಡೆಸಲಾಗಿ ಇದು ಸೂರ್ಯ ಕಚ್ಚಿಯಲ್ಲಿ ಸುಮಾರು 30000 ಡ್ಯೂಶ್ ಮಾರ್ಕಿನ ಬೆಲೆಯನ್ನು ಪಡೆದಿದೆ.

★

ದಿವ್ಯವಾಣಿ

ನೀವು ಎಲ್ಲಾ ನಿಯಮಗಳನ್ನೂ ಕಲಿಯಿರಿ ; ಪ್ರತಿಯೊಂದನ್ನೂ ಕಲಿಯಿರಿ; ನೀವು ಆವುಗಳನ್ನು ವ್ಯರ್ಥಗೊಳಿಸುವಷ್ಟು ಕಲಿಯಿರಿ – ಇರ್ವಿನ್ ಹ್ಯೂಸ್‌ಬರಿ

SHAKTI SUDHA

A Superb Tonic

Contribute Liberally to the National Defence Fund

Edited Printed and Published by Dharmapracharaprata M. S. Krishna Rao (Proprietor) at the Satyagraha Press, Chamarajapuram Mysore

ಸರಕಾರದ ಗಂಧದ ಎಣ್ಣೆ ಕಾರ್ಖಾನೆ

ಮೈಸೂರು – 8 (ದಕ್ಷಿಣ ಭಾರತ)

ಸಂ. ಎಫ್ – 26 / 74 – 75 ತಾ|| 10 – 2 – 1975

ಜನರಲ್ ಮ್ಯಾನೇಜರ್‌ರವರ ಕಚೇರಿ, ಸರ್ಕಾರಿ ಗಂಧದಹುರದ ಎಣ್ಣೆ ಕಾರ್ಖಾನೆ, ಮೈಸೂರು – 570008

ವಿಷಯ :– ಅಬ್‌ಸ್ಟ್ರಾಕ್ಟ್ ಟೆಂಡರ್ ಪ್ರಕಟಣೆ – ವ್ಯಾಗನ್‌ಗಳಿಂದ ಹೆಬ್ಬೆಯ ಕಲ್ಲಿದ್ದಲನ್ನು ಅನ್‌ಲೋಡಿಂಗ್ ಮಾಡುವುದು ಮತ್ತು ಸಾಗಾಣಿಕೆ ಇತ್ಯಾದಿಗಳನ್ನು ಮಾಡುವುದಕ್ಕೆ ವಾರ್ಷಿಕ ಕಾಂಟ್ರಾಕ್ಟ್ – 1975–76 ನೇ ವರ್ಷಕ್ಕೆ ಕಾಂಟ್ರಾಕ್ಟ್

★

ಮೇಲ್ಕಂಡ ಕಾಂಟ್ರಾಕ್ಟ್‌ಗೆ ಸಂಬಂಧಿಸಿದಂತೆ ಮೇಲ್ಕಂಡಂತೆ ಹೆಸರು ಬರೆದ ಮೊಹರಾದ ಟೆಂಡರ್‌ಗಳನ್ನು ರೂ. 500/– ಪಾತ್ರ ಟೆಂಡರ್ ಠೇವಣಿಯೊಂದಿಗೆ 7 ನೇ ಮಾರ್ಚ್ 1975 ಮಧ್ಯಾಹ್ನ 4 ಗಂಟೆಗೆ ಮುಂಚೆ ಸ್ವೀಕರಿಸಲ್ಪಡುವುದು. ಟೆಂಡರ್‌ಗಳು ಸ್ವೀಕರಿಸಲ್ಪಡುವುದಿಲ್ಲ 27 ನೇ ಫೆಬ್ರವರಿ 1975 ರ ಮೈಸೂರು ಗೆಜೆಟ್‌ನಲ್ಲಿ ವಿವರಯುಕ್ತ ಟೆಂಡರ್ ಪ್ರಕಟಣೆ ಪ್ರಕಟವಾಗಲಿದೆ ವಿವರಯುಕ್ತ ಟೆಂಡರ್ ಪ್ರಕಟಣೆಯನ್ನು ಕೆಲಸದ ವೇಳೆಗಳಲ್ಲಿ ಜನರಲ್ ಮ್ಯಾನೇಜರ್‌ರವರ ಕಚೇರಿಯಿಂದ ಸಹಾ ಪಡೆಯಬಹುದು ಅಥವಾ ಕೋರಿಕೆಯ ಮೇಲೆ ಕಳುಹಿಸಲಾಗುವುದು

ಸಹಿ/– ಜನರಲ್ ಮ್ಯಾನೇಜರ್

ಸಂ. ಎಸ್‌ಜಿ. ಪಿಆರ್ / 5 /74–75

ಸಬ್ ಜೈಲ್ ಸೂಪರಿಂಟೆಂಡೆಂಟ್‌ರವರ ಕಚೇರಿ,
ಕೊಳ್ಳೇಗಾಲ, ತಾರೀಖು 20–1–1975

ಟೆಂಡರ್ ಪ್ರಕಟಣೆ

1–4–1975 ರಿಂದ 31–3–1976 ರ ವರೆಗೆ ಈ ಸಬ್ ಜೈಲಿನ ಬಂದಿಗಳಿಗಾಗಿ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಸಾರ್ವಜನಿಕರಿಂದ, ಟೆಂಡರ್ ಷರತ್ತುಗಳಿಗೆ ಅನುಸಾರವಾಗಿ ಎಂದು ಟೆಂಡರ್ ಫಾರಂನಲ್ಲಿ ನಮೂದಿಸಿದ ಮೊಹರಾದ ಟೆಂಡರ್‌ಗಳನ್ನು ಈ ಮೂಲಕ ಕರೆಯಲಾಗಿದೆ ಲಾಟ್ ಪ್ರೊಂಪತ್ತಿಗೆ ರೂ. 1/– ಸಾವತಿ ಮಾಡಿ ಈ ಕೆಳಗೆ ಸಹಿ ಮಾಡಿರುವವರಿಂದ ಟೆಂಡರ್ ಫಾರಂಗಳನ್ನು ಪೊಂದಬಹುದು.

1 ಈ ಕೆಳಗೆ ಸಹಿ ಮಾಡಿರುವವರು ಕೊಳ್ಳೇಗಾಲದ ತಾಲ್ಲೂಕ್ ಕಚೇರಿಯಲ್ಲಿ 26–2–1975 ರ ಮಧ್ಯಾಹ್ನ 3 ಗಂಟೆ ವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವರು.

2 ಟೆಂಡರ್‌ಗಳನ್ನು ಸಬ್ ಜೈಲ್ ಸೂಪರಿಂಟೆಂಡೆಂಟ್, ಕೊಳ್ಳೇಗಾಲ ಇವರ ವಿಳಾಸಕ್ಕೆ ಬರೆಯುವುದು ಮತ್ತು " ಕೊಳ್ಳೇಗಾಲದ ಸಬ್ ಜೈಲಿಗೆ ಆಹಾರ ಪದಾರ್ಥಗಳ ಸರಬರಾಜಿಗಾಗಿ ಟೆಂಡರ್‌ಗಳು " ಎಂದು ಬರೆಯಬೇಕು.

3 ಟೆಂಡರ್ ಮೌಲ್ಯದ ಠೇವಣಿ 5 ಇದಕ್ಕಿಂತ ಕಡಿಮೆ ಇಲ್ಲದಂತೆ, ರಾಜ್ಯದ ಯಾವುದೇ ಸರ್ಕಾರಿ ಖಜಾನೆಗಳಲ್ಲಿ ಅಥವಾ ರಿಸರ್ವ್ ಬ್ಯಾಂಕ್‌ನಲ್ಲಿ " ದಿವಿನ್ಯೂ ಠೇವಣಿ " ಜಾತಿಗೆ ಠೇವಣಿ ಮಾಡಿದ್ದಕ್ಕೆ ಖಜಾನೆ ರಶೀತಿಯನ್ನು ಟೆಂಡರ್‌ಗೆ ಲಗತ್ತಿಸಬೇಕು ಇದಿಲ್ಲದೆ ಟೆಂಡರ್ ಅಂಗೀಕರಿಸಲ್ಪಡುವುದಿಲ್ಲ

4 ಒಪ್ಪಂದ ಬಾಂಡ್ ಜಾರಿಗೆ ಬರುವ ಮುನ್ನ ಒಂದು ವರ್ಷ ಕಾಲ ಟೆಂಡರ್ ಮೌಲ್ಯದ ಠೇವಣಿ 10 ಹಣವನ್ನು ಯಶಸ್ವಿ ಆದ ಟೆಂಡರ್‌ದಾರರು ಠೇವಣಿ ಆಗಿ ಇಡಬೇಕು.

5 ಪ್ರತಿದಿನ ಬೆಳಿಗ್ಗೆ 8 ಗಂಟೆ ಮತ್ತು ಮಧ್ಯಾಹ್ನ 3 ಗಂಟೆಗೆ ಬಂದೀಖಾನೆಗೆ ಆಹಾರ ಪದಾರ್ಥಗಳ ಸರಬರಾಜಿಗೆ ಯಶಸ್ವಿ ಆದ ಟೆಂಡರ್‌ದಾರರು ವ್ಯವಸ್ಥೆ ಗೊಳಿಸಬೇಕು.

6 ಕಾಂಟ್ರಾಕ್ಟ್‌ನ ಇತರ ಷರತ್ತುಗಳು ಮತ್ತು ಕಾಂಟ್ರಾಕ್ಟ್ ಡಾಕ್ಯುಮೆಂಟ್‌ಗಳು ಇವನ್ನು ಕೆಲಸದ ಎಲ್ಲ ದಿನಗಳಲ್ಲಿ ಕೊಳ್ಳೇಗಾಲದ ತಾಲ್ಲೂಕ್ ಕಚೇರಿಯಲ್ಲಿ ಬೆಳಿಗ್ಗೆ 10–30 ರಿಂದ ಸಂಜೆ 5–30 ರ ವರೆಗೆ ಯಾವುದೇ ಕಾಲದಲ್ಲಿ ನೋಡಬಹುದು.

ಸಹಿ/– ಸಬ್ ಜೈಲ್ ಸೂಪರಿಂಟೆಂಡೆಂಟ್, ಕೊಳ್ಳೇಗಾಲ.